ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ನನಗೆ 57 ವರ್ಷ ವಯಸ್ಸು. ಆಧಾರ್ ಕಾರ್ಡ್ ಇದೆ. ನಾನು ಓಲ್ಡ್ ಏಜ್ ಪೆನಷನ್ ತೆಗೆದುಕೊಳ್ಳುತಿಲ್ಲ. ನನಗೆ 65 ವರ್ಷ ಮೇಲ್ಪಟ್ಟಾಗಿದ್ದು ಓಲ್ಡ್ ಏಜ್ ಪೆನಷನ್ ತೆಗೆದುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ದಿನ ನಾನು ಜಯಪುರ ಗೇಟ್ ಬಳಿ ಕೂಲಿಕೆಲಸಕ್ಕೆ ಹೋಗಿದ್ದೆನು. ನನಗೆ ಅಪಘಾತಪಡಿಸಿದ ನಂತರ ನನಗೆ ಪ್ರಜ್ಞೆ ತಪ್ಪಿತ್ತು ವಾಹನ ಯಾರು ಓಡಿಸುತ್ತಿದ್ದ ರು ಮತ್ತು ಯಾರಿಗೆ ಸೇರಿದ್ದು ಎಂದು ಸಹ ನನಗೆ ಗೊತ್ತಾಗಲಿಲ್ಲ. ನನಗೆ ಟ್ರ್ಯಾಕ್ಟರ್ ವಾಹನ ನನಗೆ ಡಿಕ್ಕಿಪಡಿಸಿದೆ ಎಂದು ನಾನು ಸಾಕ್ಷಿ ನುಡಿಸುತ್ತೇನೆ. ಈ ವಿಚಾರವಾಗಿ ನನ್ನ ಮಗ ದೂರು ನೀಡಿರುತ್ತಾರೆ. ಅವರು ಆ ಸ್ಥಳದಲ್ಲಿ ಇರಲಿಲ್ಲ. ಅಪಘಾತವಾದ ದಿನ ನಾನು ಟ್ರ್ಯಾಕ್ಟರ್ ಮೇಲೆ ಕುಳಿತುಕೊಂಡು ಬರುವಾಗ ಕೆಳಗೆ ಬಿದ್ದು ಗಾಯಗೊಂಡಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ನಾನು ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಅವುಗಳನ್ನು ನಾನು ಸೃಷಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಬಳಿ ಬಿಪಿಲ್ ಕಾರ್ಡ್ ಇದೆ. ಆಸ್ಪತ್ರೆಯಲ್ಲಿ 5 ಲಕ್ಷ ಖರ್ಚು 30 ಸಾವಿರ ಓಡಾಡಲು ಖರ್ಚು ಆಗಿಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಯಾರು ಬಳಿ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಗಾಯಗಳು ಆಗಿಲ್ಲದೇ ಇದ್ದರೂ ಸಹ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು